ಸೂಳ್ಯ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರಿಗೆ ತೊಂದರೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 28(558)

ಸದಸ್ಯರ ಹೆಸರು ಶ್ರೀ ಎಸ್ ಅಂಗಾರ್(ಸೂಳ್ಯ)

ಉತ್ತರಿಸುವ ಸಚಿವರು ಶ್ರೀ ಸಿ ಆರ್ ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ) ಸೂಳ್ಯ ತಾಲ್ಲೋಕು ಕೇಂದ್ರ ಸ್ಥಾನವಾದ ಸುಳ್ಯದ ಬಸ್ ನಿಲ್ದಾಣದಲ್ಲಿ ಮಳೆಗಾಲದಲ್ಲಿ ಕೆಸರು ಹಾಗೂ ಬೇಸಿಗೆ ಕಾಲದಲ್ಲಿ ಧೂಳಿನಿಂದಾಗಿ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರಿಗೆ ಹಾಗೂ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದರೆ ಈ ತೊಂದರೆಯನ್ನು ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ

ಆ) ಇದಕ್ಕಾಗಿ ಈಗಾಗಲೇ ಅನುದಾನ ಒದಗಿಸಲಾಗಿದೆಯೇ ಒದಗಿಸಿದ್ದರೆ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ(ವಿವರಗಳನ್ನು ವರ್ಷವಾರು, ಅನುದಾನವಾರು ನೀಡುವುದು)?

ಉತ್ತರ

ಅ) ಬಂದಿದೆ

ಸಧ್ಯಕ್ಕೆ ಈ ತೊಂದರೆಯನ್ನು ನಿವಾರಿಸಲು ಜಲಬಂಧಿತ ರಸ್ತೆಯನ್ನು ಅಳವಡಿಸಲಾಗಿದೆ

ಆ) ಬಸ್ ನಿಲ್ದಾಣದ ಆವರಣಕ್ಕೆ ಡಾಂಬರು ಹಾಕಲು ಹಣವನ್ನು ಒದಗಿಸಿರುವುದಿಲ್ಲ ಕಾರಣವೇನೆಂದರೆ, ಹಾಲಿ ಇರುವ ಬಸ್ ನಿಲ್ದಾಣವು ತಾತ್ಕಾಲಿಕವಾಗಿದ್ದು, ಖಾಯಂ ಬಸ್ ನಿಲ್ದಾಣ ನಿರ್ಮಿಸಲು ಉದ್ದೇಶಿಸಿದೆ ಈ ಉದ್ದೇಶಕ್ಕಾಗಿ ಹಾಲಿ ಇರುವ ನಿವೇಶನಕ್ಕೆ ಹೊಂದಿಕೊಂಡಂತೆ ಇರುವ 0 60 ಎಕರೆ ನಿವೇಶನವನ್ನು ಪಡೆದುಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ ಈ ನಿವೇಶನ ಪಡೆದುಕೊಂಡ ನಂತರ, ಖಾಯಂ ಬಸ್ ನಿಲ್ದಾಣ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು